# ಗೇರು ಸಂಶೋಧನ ನಿರ್ದೇಶನಾಲಯಕ್ಕೆ ಮಾಜಿ ಸಚಿವ ರೈ ಭೇಟಿ

**ಪುತ್ತೂರು,** ಜೂ. 7: ಅರಣ್ಯ ಮತ್ತು ಪರಿಸರ ಖಾತೆಯ ಮಾಜಿ ಸಚಿವ ಬಿ. ರಮಾನಾಥ ರೈ ಅವರು ಪುತ್ತೂರಿನಲ್ಲಿರುವ ಗೇರು ಸಂಶೋಧನ ನಿರ್ದೇಶನಾಲಯಕ್ಕೆ ಜೂ. 5ರಂದು ಭೇಟಿ ನೀಡಿದರು.



ಗೇರು ಸಂಶೋಧನ ನಿರ್ದೇಶನಾಲಯಕ್ಕೆ ಮಾಜಿ ಸಚಿವ ರಮಾನಾಥ ರೈ ಭೇಟಿ ನೀಡಿದರು.

ಅವರು ಹೊಸ ಹೈಬ್ರಿಡ್ ತಳಿ (ಎಚ್-130) ಯ ಬಗ್ಗೆ ಹಾಗೂ ಅತಿ ಸಾಂದ್ರ ಪದ್ಧತಿಯ ಬಗ್ಗೆ ಮಾಹಿತಿ ಪಡೆದರು. ಕೇಂದ್ರದ ವಿವಿಧ ತಾಕುಗಳಿಗೆ ಭೇಟಿ ನೀಡಿ ತೋಟಗಳನ್ನು ವೀಕ್ಷಿಸಿದರು. ಸಂಸ್ಥೆಯ ನಿರ್ದೇಶಕ ಡಾ। ಎಂ. ಗಂಗಾಧರ್ ನಾಯಕ್, ಹಿರಿಯ ವಿಜ್ಞಾನಿ ಡಾ। ಶಂಸುದ್ದೀನ್ ಮಾಹಿತಿ ನೀಡಿದರು. ಸ್ಥಳದಲ್ಲೇ 600 ಗಿಡಗಳನ್ನು ಖರೀದಿಸಿ, ಆಧುನಿಕ ಕೃಷಿ ಮಾಡುವುದಾಗಿ ರಮಾನಾಥ ರೈ ತಿಳಿಸಿದರು.

ಈ ಸಂದರ್ಭ ಕೊರೊನಾ ತಡೆಗಟ್ಟಲು ಸಂಸ್ಥೆಯಲ್ಲಿ ತೆಗೆದುಕೊಂಡ ಮುಂಜಾಗ್ರತಾ ಕ್ರಮದ ಬಗ್ಗೆ ಮಾಹಿತಿ ಪಡೆದುಕೊಂಡರು.